**ದಿನಾಂಕ 21.06.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಆರ್.ಕೆ. ವಕೀಲರಿಂದಃ**

1. ನಾನು 7 ನೇ ತರಗತಿಯವರೆಗೂ ವ್ಯಾಸಾಂಗ ಮಾಡಿರುತ್ತೇನೆ. ನಾನು, ಪ್ರತಿವಾದಿ 1 ಮತ್ತು 3 ರವರು ರಂಗಪ್ಪ ಮತ್ತು ತಿಮ್ಮಕ್ಕನ ಮಕ್ಕಳು. ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಸದರಿಯವರು ದುಡಿದು ಸಂಪಾದಿಸಿದ ಆಸ್ತಿಗಳು ಎಂದರೆ ಸರಿ. ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳು ದಾವಾ ಸ್ವತ್ತಿನ ಸಮೇತ ನಗರ ಸಭೆ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ದಿನಾಂಕ 02.07.1990 ರಂದು ನಾನು ಮತ್ತು 1 ಮತ್ತು 3 ಪ್ರತಿವಾದಿಗಳು ನೊಂದಣಿ ವಿಭಾಗ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿ. ನೊಂದಣಿ ವಿಭಾಗ ಪತ್ರದ ಪ್ರಕಾರ ಎಲ್ಲಾ ಸರ್ವೆ ನಂಬರ್ ಗಳಿಂದ 1 ನೇ ಪ್ರತಿವಾದಿಗೆ 5 ಎಕರೆ ಭಾಗ ಬಂದಿದೆ ಎಂದರೆ ಸರಿ. ಅದೇ ರೀತಿ ನನಗೆ ಎಲ್ಲಾ ಸರ್ವೆ ನಂಬರ್ ಗಳಿಂದ 4 ಎಕರೆ 36 ಗುಂಟು ಭಾಗ ಬಂದಿದೆ ಎಂದರೆ ಸರಿ. ಅದೇ ರೀತಿ 3 ನೇ ಪ್ರತಿವಾದಿಗೆ ಎಲ್ಲಾ ಸರ್ವೆ ನಂಬರ್ ಗಳಿಂದ 5 ಎಕರೆ 15 ಗುಂಟೆ ಬಂದಿದೆ ಎಂದರೆ ಸರಿ. 4 ನೇ ವಾದಿಯಾದ ಲಿಂಗರಾಜುವಿಗೆ ಎಲ್ಲಾ ಸರ್ವೆ ನಂಬರ್ ಗಳಿಂದ 6 ಎಕರೆ ಬಂದಿದೆ ಎಂದರೆ ಸರಿ. 5 ನೇ ವಾದಿಯಾದ ಕೃಷ್ಣಪ್ಪನಿಗೆ 5 ಎಕರೆ 18 ಗುಂಟೆ ಬಂದಿದೆ ಎಂದರೆ ಸರಿ. ಪ್ರತಿವಾದಿ ಹುಚ್ಚರಂಗಪ್ಪನಿಗೆ 4 ಎಕರೆ 15 ಗುಂಟೆ ಬಂದಿದೆ ಎಂದರೆ ಸರಿ.
2. ಸರ್ವೆ ನಂ.106 ರಲ್ಲಿ 6 ಎಕರೆ 6 ಗುಂಟೆ ಜಮೀನು ನನ್ನ ತಂದೆ ತಾಯಿಗೆ ನೊಂದಣಿ ಪಾಲು ವಿಭಾಗದ ಪ್ರಕಾರ ಅವರಿಗೆ ಭಾಗ ಬಂದಿದೆ ಎಂದರೆ ಸರಿ. 3 ನೇ ಪ್ರತಿವಾದಿಯಾದ ನನ್ನ ತಂಗಿ ಕೆ.ಆರ್. ಲಲಿತ ರನ್ನು ನೊಂದಣಿ ಪಾಲು ವಿಭಾಗದಲ್ಲಿ ಸೇರಿಸಿಕೊಂಡಿಲ್ಲ ವುತ್ತು ಯಾವುದೇ ಭಾಗ ಕೊಟ್ಟಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ಐಟಂ ನಂ. 1 ಮತ್ತು 2 ರ ಆಸ್ತಿಗಳನ್ನು ನಮ್ಮ ತಂದೆ ಮತ್ತು ತಾಯಿ ಗುಜ್ಜಾರಪ್ಪ ಬಿನ್ ಹನುಮಂತಪ್ಪ ರವರಿಂದ ಕೊಂಡುಕೊಂಡಿರುತ್ತಾರೆ ಎಂದರೆ ಸರಿ.

3. ನೊಂದಣಿ ಪಾಲು ವಿಭಾಗ ಪತ್ರದ ಮೂಲಕ ಹಿಸ್ಸೆಗಳು ಬಂದಂತೆ ಎಲ್ಲಾ ದಾಖಲಾತಿಗಳು ಎಲ್ಲರ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ಸರಿ. ಅದೇ ರೀತಿ ದಾವಾ ಸ್ವತ್ತುಗಳೂ ಸಹ ನಮ್ಮ ತಂದೆ ತಾಯಿಯವರ ಹೆಸರಿಗೆ ನೊಂದಣಿಯಾಗಿದೆ ಎಂದರೆ ಸಾಕ್ಷಿಯು ಜೀವನಾಂಶಕ್ಕೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಪಾಲು ವಿಭಾಗ ಪತ್ರದಲ್ಲಿ ನಮ್ಮ ತಂದೆ ತಾಯಿಯವರ ಜೀವನಾಂಶಕ್ಕಾಗಿ ಎಂದು ಬರೆಸಿಲ್ಲ.

4. ಎಲ್ಲಾ ಒಟ್ಟು ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಂಡ ಮೇಲೆ ನಾವೆಲ್ಲರೂ ಬೇರೆ ಬೇರೆ ವಾಸ ಮಾಡುತ್ತಿದ್ದೆವು ಹಾಗೂ ನಮ್ಮ ತಂದೆ ತಾಯಿಯೂ ಸಹ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಾನು ತುಮಕೂರಿನಲ್ಲಿ ವಾಸವಿದ್ದೆ ಎಂದರೆ, ಸಾಕ್ಷಿಯು 12 ವರ್ಷಗಳಿಂದ ನಾನು ಇಲ್ಲೆ ಇದ್ದು ಈಗ ಕೊರಟಗೆರೆಯಲ್ಲಿ ವಾಸವಿದ್ದೇನೆ. ಭಾಗದ ನಂತರ ನನ್ನ ಮತ್ತು ತಂದೆ ತಾಯಿಯ ನಡುವೆ ರಕ್ತಸಂಬಂಧ ಬಿಟ್ಟು ಬೇರೆ ಯಾವುದೇ ಸಂಬಂಧವಿರಲಿಲ್ಲ ಎಂದರೆ ಸರಿ.

5. ನಮ್ಮ ತಂದೆಯವರು ಜೀವಂತವಿದ್ದಾಗ ದಾವಾ ಸ್ವತ್ತನ್ನು 4 ಮತ್ತು 5 ನೇ ಪ್ರತಿವಾದಿಯಾದ ಮನೋಜ್ ಮತ್ತು ಉದಯ್ ರವರಿಗೆ ತಲಾ 1 ಎಕರೆ 20 ಗುಂಟೆ ಮರಣ ಶಾಸನ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನನ್ನ ತಂದೆಯವರು ಮೇಲೆ ಹೇಳಿದಂತೆ ಮರಣ ಶಾಸನ ಪತ್ರ ಬರೆದಿದ್ದಾರೆ ಎಂದು ನಮೂದಿಸಿದ್ದೇನೆ ಎಂದರೆ ಸರಿ.

6. ದಾವಾ ಸ್ವತ್ತು ನನ್ನ ತಂದೆ ತಾಯಿಯ ಮರಣಾನಂತರ ಎಲ್ಲಾ ಮಕ್ಕಳಿಗು ಸಮಾನಾಗಿ ಬರತಕ್ಕದ್ದು ಎಂದು ವಿಭಾಗ ಪತ್ರದಲ್ಲಿ ಬರೆಸಿಲ್ಲ. ನನ್ನ ತಂದೆಯ ಮರಣ ನಂತರ ದಾವಾ ಸ್ವತ್ತಿನ ಐಟಂ ನಂ.1 ನ್ನು 4 ಮತ್ತು 5 ನೇ ಪ್ರತಿವಾದಿಯವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಸದರಿ ಖಾತೆಯಾದ ನಂತರ ನಾನು ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಖಾತೆ ಬದಲಾವಣೆಯನ್ನು ಪ್ರಶ್ನೆ ಮಾಡಿರುವುದಿಲ್ಲ. ಉಳಿದ 3 ಎಕರೆ ಆಸ್ತಿಯು ನನ್ನ ತಂದೆಯ ಮರಣಾನಂತರ ನನ್ನ ತಾಯಿಯ ಹೆಸರಿಗೆ ಬಂದಿದೆ ಎಂದರೆ ಸರಿ.

7. ನನ್ನ ತಾಯಿಯು 3 ನೇ ಪ್ರತಿವಾದಿಗೆ 1 ಎಕರೆ ಜಮೀನನ್ನು ವಿಲ್ ಮುಖಾಂತರ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿಯು ನಮ್ಮ ತಾಯಿಯು ನಾನು ಯಾರಿಗೂ ಅನ್ಯಾಯ ಮಾಡುವುದಿಲ್ಲ ಎಂದು ಹೇಳಿ ನಾವು 6 ಜನ ಮಕ್ಕಳಿಗೂ ವಿಲ್ ಮುಖಾಂತರ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ಮಾಡಿರುವ ವಿಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

8. 3 ಎಕರೆ ಜಮೀನಿನಲ್ಲಿ ಉಳಿದ 2 ಎಕರೆಯನ್ನು 4 ಮತ್ತು 5 ನೇ ಪ್ರತಿವಾದಿಗೆ ತಲಾ 1 ಎಕರೆ ಜಮೀನನ್ನು ವಿಲ್ ಮುಖಾಂತರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1, 2, 4 ಮತ್ತು 5 ಪ್ರತಿವಾದಿಗಳು ನಮ್ಮ ತಂದೆ ತಾಯಿಯ ಪೋಷಣೆಯನ್ನು ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಸಹ ನೋಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನಾನು ನಮ್ಮ ತಂದೆ ತಾಯಿಯ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದ ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

9. ನಮ್ಮ ತಂದೆ ತಾಯಿಯ ಸಂಬಂಧಪಟ್ಟ ರೇಷನ್ ಕಾರ್ಡ್, ಆಧಾರ್ ಕಾರ್ಡ್ ಯಾವುದೇ ದಾಖಲಾತಿಯನ್ನು ನಾನು ಹಾಜರುಪಡಿಸಿಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**